

ಆಸೆಪಟ್ಟ ಮಾತ್ರಕ್ಕೇ ತೋಟ ಮಾಡಿಕೊಳ್ಳುವುದು ಸಾಧ್ಯವೇ? ಹಣ ಎಲ್ಲಿಂದ ತರುವುದು? ಹಣ ಬೇಕೆಂದರೆ ಕೆಲಸ ಮಾಡಬೇಕು...

ಮನೆ ಮೇಲೆ ಒಣ ಹಾಕಿದ ಬಟ್ಟೆಗಳನ್ನು ತರಲು ಹೋದ ಅದಿತಿ, ಕಣ್ಣಿಗೆ ತಂಪು ತುಂಬಿದ ಪಕ್ಕದ ಮನೆಯ ತಾರಸಿ ತೋಟವನ್ನೇ ಕ್ಷಣಕಾಲ ನೋಡುತ್ತಾ ನಿಂತಳು. 'ತನಗೂ ಸ್ವಂತದ ಸಂಪಾದನೆ ಇದ್ದು ಒಂದಷ್ಟು ಹಣ ಉಳಿತಾಯ ಮಾಡಿಕೊಂಡರೆ, ನಾನೂ ಸಹ ಇದೇ ರೀತಿ ಸ್ವಂತ ತಾರಸಿ ತೋಟದ ಒಡತಿ ಆಗಬಹುದಲ್ವಾ' ಎಂದುಕೊಳ್ಳುತ್ತಲೇ, 'ಸದ್ಯಕ್ಕೆ ತಾರಸಿ ತೋಟದ ಕನಸು ಕಾಣೋದಷ್ಟೇ ನನ್ನ ಭಾಗ್ಯ...' ಎಂದು ಬೇಸರದ ನಿಟ್ಟುಸಿರಿಡುತ್ತಾ ಒಣಗಿದ ಬಟ್ಟೆಗಳೊಂದಿಗೆ ಮನೆಯೊಳಗೆ ಹೋದಳು. ಇಂಥಾ ನಿರಾಸೆಯ ನಿಟ್ಟುಸಿರುಗಳು ಆಕೆಗೆ ಹೊಸದೇನಲ್ಲ.

ಅದಿತಿಯ ಬಗ್ಗೆ ನಿಮಗೆ ಪರಿಚಯ ಇಲ್ಲ ಅಲ್ವಾ? ಆಕೆ ಮೂವತ್ತಮೂರರ ಹರಯದ ಗೃಹಸ್ಥೆ. ಇಬ್ಬರು ಮಕ್ಕಳಿದ್ದಾರೆ. ಗಂಡನಿಗೆ ಖಾಸಗಿ ಬ್ಯಾಂಕ್‌ನಲ್ಲಿ ಉದ್ಯೋಗ. ಈಕೆಯ ಅತ್ತೆ ಕೋಮಲಮ್ಮ ಮೂರೂವರೆ ವರ್ಷಗಳ ಹಿಂದೆ ಕೋವಿಡ್ ಕಾರಣದಿಂದ ತೀರಿಹೋಗಿದ್ದರೆ, ಮಾವ ದೇವೇಂದ್ರಪ್ಪ ಕಳೆದ ಆರು ತಿಂಗಳ ಹಿಂದೆಯಷ್ಟೇ ಸಾವನ್ನಪ್ಪಿದ್ದಾರೆ.

ಚಿಕ್ಕಂದಿನಿಂದ ಈ ಅದಿತಿ ಓದಿನಲ್ಲಿ ಅಷ್ಟೇನೂ ಜಾಣೆಯಲ್ಲದಿದ್ದರೂ ಇತರೆ ಚಟುವಟಿಕೆಗಳಲ್ಲಿ ಬಹಳ ಚುರುಕಿನ ಹುಡುಗಿ. ರಂಗೋಲಿ ಹಾಕೋದು, ಹೊಸ ರುಚಿಯ ಅಡುಗೆ ತಯಾರಿಸೋದು, ಒಳಾಂಗಣ ಅಲಂಕಾರ, ತೋಟಗಾರಿಕೆ, ಮೆಹೆಂದಿ, ಹೊಸ ಹೊಸ ಹೇರ್ ಸ್ಟೈಲ್ ಮಾಡೋದು, ಕಸೂತಿ, ಪೇಂಟಿಂಗ್ ಇಂಥವುಗಳಲ್ಲಿ ಬಹಳ ಜಾಣೆ. ಅವಳ ಆಸಕ್ತಿ ಹಾಗೂ ಕೌಶಲ್ಯಗಳನ್ನು ಆಗೀಗ ನಾನೂ ಕಂಡಿದ್ದೇನೆ.

'ಜಸ್ಟ್ ಪಾಸ್ ಆದ್ರೂ ಪರವಾಗಿಲ್ಲ ಯಾವುದಕ್ಕೂ ಒಂದು ಡಿಗ್ರಿ ಸರ್ಟಿಫಿಕೇಟ್ ಕೈಯಲ್ಲಿರಲಿ' ಅಂತ ಅದಿತಿ ಅಮ್ಮ, ಅಂದ್ರೆ ಮಾಲಾ ಯಾವಾಗ್ಲೂ ಅದಿತಿಗೆ ಹೇಳ್ತಿರೋಳು. ಆದ್ರೆ ಸಾಮಾನ್ಯ ಬಿ.ಎ. ಓದೋದೂ ಕೂಡ ನನ್ ಕೈಲಾಗೋಲ್ಲ ಎಂದು ನಿರಾಕರಿಸಿದ ಅದಿತಿಯನ್ನು ಹದಿನೆಂಟು ತುಂಬಿದ ಮೇಲೆ, ತನ್ನ ಗಂಡನ ಅಕ್ಕನ ಮಗನಿಗೆ ಸಂಬಂಧದಲ್ಲೇ ಮದುವೆ ಮಾಡಿಕೊಟ್ಟು ಅದಿತಿಯ ಅಪ್ಪ ಸಮಾಧಾನ ಮಾಡಿಕೊಂಡ್ರೆ, ಮದುವೆ ಮಾಡಿಕೊಟ್ಟ ಹಿಂದೆಯೇ ನಾಲ್ಕು ವರ್ಷಗಳಲ್ಲಿ ಎರಡು ಬಾಣಂತನವನ್ನೂ ಮುಗಿಸಿಕೊಟ್ಟ ಮಾಲಾ, 'ತನ್ನ ಮಗಳ ನಸೀಬೇ ಇಷ್ಟಿರೋವಾಗ ತಾನಾದರೂ ಏನು ಮಾಡಲಾದೀತು' ಎಂದು ಮನಸ್ಸಿಗೆ ಸಮಾಧಾನ ತಂದುಕೊಳ್ಳಲು ಪ್ರಯತ್ನಿಸುತ್ತಿದ್ದುದುಂಟು.

'ನನ್ನ ದೃಷ್ಟಿಯಿಂದ ನೋಡಿದರೆ ಮಾಲಾ ಬಹಳ ಅದೃಷ್ಟವಂತಳೇ. ಏಕಂದ್ರೆ, ಅದಿತಿ, ನನ್ನ ಮಗಳಂತೆ ಎರಡೆರಡು ಪದವಿ ಓದಿ, ಕೆಲಸಕ್ಕೆ ಸೇರಿ, ಪ್ರೀತಿಸಿದೆ ಅಂತ ಹೇಳಿ ಹೊರರಾಜ್ಯದ ಭಾಷೆ, ಸಂಸ್ಕೃತಿ ಆಚಾರ ವಿಚಾರಗಳಲ್ಲಿ ಬೇರೆ ಬಳಕೆ ಇರುವ ಹುಡುಗನನ್ನು ವರಿಸಿ ಹೆತ್ತವರ ಮನಸ್ಸಿಗೆ ಕಿರಿಕಿರಿ ತರಲಿಲ್ಲ ನೋಡಿ! ನನ್ನ ಮಗಳು ಚೆನ್ನಾಗಿಯೇ ಬದುಕುತ್ತಿದ್ದಾಳೆ ನಿಜ. ಆದರೂ, ಇರುವ ಒಬ್ಬ ಮಗಳ ಮದುವೆ ನಮ್ಮ ಇಚ್ಛೆಯಂತಾಗಲಿಲ್ಲ ಎನ್ನುವುದೊಂದು ಬೇಸರ ಉಳಿದು ಬಿಟ್ಟಿದೆ ನೋಡಿ'

ಹೀಗೆ ಹೆತ್ತವರ ಇಷ್ಟಕ್ಕೆ ವಿರುದ್ಧ ಬದುಕುತ್ತಿರುವ ಎಷ್ಟೋ ಮಕ್ಕಳ ಕಥೆಗಳನ್ನು ಉದಾಹರಣೆ ಕೊಟ್ಟು ನೂರು ಸಲ ಹೇಳಿದ್ರೂ, 'ಅದಿತಿ ಒಂದು ಪದವಿ ಓದ್ಕೊಂಡು, ಏನಾದ್ರೂ ಕೆಲಸ ಮಾಡ್ಕೊಂಡು, ನಾಕಾರು ಕಾಸು ಸಂಪಾದನೆ ಮಾಡಿದ್ರೆ ಸಾಕಿತ್ತು. ನನ್ನಂತೆಯೇ ನನ್ನ ಮಗಳೂ ತನ್ನ ಗಂಡನ ಹತ್ರ ಹತ್ತು ರೂಪಾಯಿಗೂ ಕೈ ಚಾಚೋ ಹಾಗೆ ಆಯ್ತಲ್ಲಾ' ಅನ್ನೋ ವ್ಯಥೆ ಮಾಲಾನ ಬಿಡದಂತೆ ಕಾಡ್ತಿತ್ತು.

ಇತ್ತ ಹಳ್ಳಿಯೂ ಅಲ್ಲದ, ಅತ್ತ ಪಟ್ಟಣವೂ ಆಗದ ಹೋಬಳಿ ಕೇಂದ್ರದಲ್ಲಿ ಬದುಕುತ್ತಿರೋ ಮಗಳು, ಗಂಡ–ಮಕ್ಳು ಮನೆಯಿಂದ ಹೋದ್ಮೇಲೆ ಖಾಲಿ ಕೂರದೆ, ಏನಾದ್ರೂ ಕೆಲಸ ಮಾಡ್ಕೊಂಡು ಅಲ್ಪಸ್ವಲ್ಪ ಸಂಪಾದ್ನೆ ಮಾಡ್ಕೊಂಡಿರಲಿ ಅನ್ನೋದು ಮಾಲಾ ಮನಸ್ಸಲ್ಲಿ ಗಟ್ಟಿಯಾಗಿತ್ತು. ಇದನ್ನು ಅದಿತಿಗೆ ನೂರಾರು ಸಲ ಹೇಳ್ತಿದ್ಲು, ಜೊತೆಗೆ ನನ್ನಂಥವರ ಕಡೆಯಿಂದಲೂ ಹೇಳಿಸ್ತಿದ್ಲು. ಪದೇ ಪದೇ ಈ ರೀತಿ ಹೇಳೋದು ನಮಗೂ ಮತ್ತೆ ಇದೇ ಮಾತನ್ನ ಪುನಃ ಪುನಃ ಕೇಳೋದು ಅದಿತಿಗೂ ಬೇಸರದ ವಿಷಯವೇ ಒಂದೇ ವಿಷ್ಯಾನ ಎಷ್ಟು ಸಲ ಅಂತ ಹೇಳ್ತಾನೇ ಇರೋಕಾಗತ್ತೆ, ಕೇಳ್ತಾನೇ ಇರೋಕಾಗುತ್ತೆ ಅಲ್ವೇ?

'ಆರಾಮಾಗಿ ಬದುಕು ಮಾಡ್ತಿರೋ ಮಗಳಿಗೆ ಏನು ನಿಮ್ಮ ಕಿರಿಕಿರಿ?